~ಮುಂಜಾನೆ ಮಾತು ~

ಪ್ರಪಂಚವನ್ನು
ಬದಲಿಸುವ ಆತುರ ಏಕೆ?
ನಮ್ಮ ವಿಚಾರಗಳನ್ನು
ವಿವೇಚನೆಗೆ
ಒಡ್ಡುತ್ತ ನಾವು
ಬದಲಾದರೆ ಪ್ರಪಂಚ
ಬದಲಾದಂತೆಯೇ.

# ವಿಜಯವಾಣಿ ನಂ. 1*

ಕನ್ನಡಿಗರ ಧ್ವನಿ

ಕನ್ನಡ ದಿನಪತ್ರಿಕೆ



ಬೆಂಗಳೂರು • ಮಂಗಳೂರು • ಹುಬ್ಬಳ್ಳಿ • ವಿಜಯಪುರ • ಮೈಸೂರು • ಗಂಗಾವತಿ • ಚಿತ್ರದುರ್ಗ • ಶಿವಮೊಗ್ಗ • ಕಲಬುರಗಿ • ಬೆಳಗಾವಿ   VIJAYAVANI • MANGALURU   ಮಂಗಳೂರು • ಸಂಪುಟ 6 • ಸಂಚಿಕೆ 234

vijayavani.net   ಇ-ಪೇಪರ್: epapervijayavani.in   VVani4U   @VVANI4U   vijayavaninews@gmail.com   ಸಹಾಯವಾಣಿ: 8884411682   23 ನವೆಂಬರ್ 2017 | ಗುರುವಾರ   23 NOVEM

ಸದಾ ಒಂದಿಲ್ಲೊಂದು ವಿವಾದದಿಂದಲೇ ಸುದ್ದಿಯಲ್ಲಿರುವ ರಾಜ್ಯದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇದೀಗ ಪ್ರಧಾನ ಮಂತ್ರಿ ಕಚೇರಿ ಅಂಗಳಕ್ಕೆ ಬಂದು ನಿಲ್ಲುವ ಸಂದರ್ಭ ಎದುರಾಗಿದೆ. ವಿಟಿಯು ಅವ್ಯವಸ್ಥೆಗಳಿಂದ ಬೇಸತ್ತಿರುವ ವಿದ್ಯಾರ್ಥಿಗಳು ತಮಗೆ ನ್ಯಾಯ ಕೊಡಿಸುವಂತೆ ಪ್ರಧಾನಿ ನರೇಂದ್ರ ಮೋದಿಗೆ ದೂರಿನ ಪತ್ರ ರವಾನಿಸಿದ್ದು, ಈ ಬಗ್ಗೆ ನೊಂದ ವಿದ್ಯಾರ್ಥಿಗಳು ವಿಜಯವಾಣಿ ಸಹಾಯವಾಣಿ ಬಳಿ ಅಳಲು ತೋಡಿಕೊಂಡಿದ್ದಾರೆ.

# ವಿಟಿಯು ಅವ್ಯವಸ್ಥೆಗೆ ಬೇಸತ್ತು ಪ್ರಧಾನಿಗೆ ವಿದ್ಯಾರ್ಥಿಗಳ ದೂರು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೆಳಗಾವಿಯಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ವ್ಯಾಪ್ತಿಯ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ವಿವಿ ಆಡಳಿತ ಮಂಡಳಿ ವಿರುದ್ಧ ಸಿಡಿದೆದ್ದಿದ್ದು, ಅವ್ಯವಸ್ಥೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿಗೆ ದೂರು ನೀಡಿದ್ದಾರೆ.

ವಿಟಿಯು ವಿರುದ್ಧ ವಿದ್ಯಾರ್ಥಿಗಳು **ವಿಜಯವಾಣಿ**ಗೆ 24 ಪುಟಗಳ ಸುದೀರ್ಘ ಪತ್ರ ಬರೆದಿದ್ದು, ಅದನ್ನೇ ಪ್ರಧಾನಿ ಮೋದಿ ಅವರಿಗೂ ಕಳುಹಿಸಿರುವುದಾಗಿ ತಿಳಿಸಿದ್ದಾರೆ.

**ಪತ್ರದಲ್ಲೇನಿದೆ?:** ವಿಟಿಯು ನಡೆಸುವ ಪರೀಕ್ಷೆ, ಮರುಮೌಲ್ಯಮಾಪನದ ವಿಳಂಬ, ಬೋಧಕರು ಪಠ್ಯಕ್ರಮ ಪೂರ್ಣಗೊಳಿಸದಿರುವುದು, ಮೌಲ್ಯಮಾಪನದ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವುದು ಸೇರಿ ಹತ್ತು ಹಲವು ವಿಚಾರಗಳ ಕುರಿತು ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಒಟ್ಟಾರೆ ವಿಟಿಯು ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವುದು ಸಾಕಷ್ಟು ಕಷ್ಟ. ಇದು ಜ್ಞಾನಸಂಗಮ ಅಲ್ಲ, ದುಡ್ಡಿನ ಸಂಗಮ ಎಂದು ವಿದ್ಯಾರ್ಥಿಗಳು ಟೀಕಿಸಿದ್ದಾರೆ.

**ನಿರ್ಲಕ್ಷ್ಯಕ್ಕೆ ಬೇಸರ:** ವಿಟಿಯು ನಡೆಸುವ ಪರೀಕ್ಷೆಗಳ ನಡುವೆ ಅಂತರವೇ ಇರುವುದಿಲ್ಲ. ಎಲ್ಲ ಪರೀಕ್ಷೆಗಳು ಒಟ್ಟಿಗೆ ನಡೆಸುವುದರಿಂದ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳಿಸಲು ಸಾಧ್ಯವಾಗುವುದಿಲ್ಲ. ಒಮ್ಮೆ ಅನುತ್ತೀರ್ಣರಾದರೆ ಬೋಧಕರೇ ವಿದ್ಯಾರ್ಥಿಗಳ ಬಗ್ಗೆ ಕಾಳಜಿವಹಿಸುವುದಿಲ್ಲ. ಪ್ರವೇಶ ಪತ್ರದಲ್ಲಿ ಅವಶ್ಯಕ ವಿಷಯಗಳೇ ಇರುವುದಿಲ್ಲ. ಒಮ್ಮೆ ಪರೀಕ್ಷೆ ನಡೆದರೆ ಫಲಿತಾಂಶ ಪ್ರಕಟಿಸಲು ವಿಟಿಯುಗೆ ಕನಿಷ್ಠ 6 ತಿಂಗಳು ಬೇಕು. ಆ ಸಮಯಕ್ಕೆ ಮತ್ತೊಂದು ಸೆಮಿಸ್ಟರ್ ಪ್ರಾರಂಭವಾಗಿರುತ್ತದೆ. ರಾತ್ರೋರಾತ್ರಿ ಫಲಿತಾಂಶ ಬಿಡುಗಡೆ ಮಾಡುವುದರಿಂದ ನಿದ್ದೆಗೆಟ್ಟು ಫಲಿತಾಂಶ ನೋಡಬೇಕಾಗಿದೆ. ಕಾಟಾಚಾರಕ್ಕೆ ಮೌಲ್ಯಮಾಪನ ಮಾಡುವುದರಿಂದ ಉತ್ತಮ ಅಂಕಗಳಿಸುವ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ ಎಂದು ನೊಂದ ವಿದ್ಯಾರ್ಥಿಗಳು ಆರೋಪಿಸಿದ್ದಾರೆ.




ಸುಮಾರು 200 ಇಂಜಿನಿಯರಿಂಗ್ ಕಾಲೇಜುಗಳಿದ್ದು, ಮರುಮೌಲ್ಯಮಾಪನಕ್ಕೆ 450ರೂ. ಛಾಯಾ ಪ್ರತಿಗೆ 350 ರೂ. ನಿಗದಿ ಮಾಡಿ ವಿದ್ಯಾರ್ಥಿಗಳ ಸುಲಿಗೆ ಮಾಡಲಾಗುತ್ತಿದೆ. ಹಳೇ ಪಠ್ಯಕ್ರಮ ಮತ್ತು ಹೊಸ ಪಠ್ಯಕ್ರಮ ಮತ್ತಷ್ಟು ಸಂಕಷ್ಟ ತಂದಿಟ್ಟಿದ್ದು, ಹಳೇ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಈ ಹಿಂದೆ ಉಳಿಸಿಕೊಂಡಿರುವ ವಿಷಯಗಳಲ್ಲಿ ಉತ್ತೀರ್ಣರಾಗಲು ಅವಕಾಶ ಕಲ್ಪಿಸಬೇಕು. ಸೂಕ್ತ ಸಮಯಕ್ಕೆ ಫಲಿತಾಂಶ ನೀಡಬೇಕು. ಶುಲ್ಕವನ್ನು ಕಡಿಮೆ ಮಾಡಬೇಕು. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನ್ಯಾಯ ಒದಗಿಸಿಕೊಡಬೇಕೆಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

## ವಿಟಿಯು ಅವ್ಯವಸ್ಥೆಗಳ ಆಗರ

ಹಿಂದಿನ ಕುಲಪತಿ ಎಚ್.ಮಹೇಶಪ್ಪ ಅವಧಿಯಲ್ಲಿ ನಡೆದ ಬೋಧಕ- ಬೋಧಕೇತರ ಹುದ್ದೆಗಳ ನೇಮಕಾತಿಯಲ್ಲಿ ಅವ್ಯವಹಾರ, ಕರ್ತವ್ಯ ಲೋಪ ಮುಂತಾದ ಕಾರಣಗಳಿಂದಾಗಿ ಮಹೇಶಪ್ಪ ಅವರನ್ನು ರಾಜ್ಯಪಾಲರು ಅಮಾನತು ಮಾಡಿದ್ದರು. ಅಲ್ಲದೆ, ಸರಿಯಾಗಿ ಬಳಕೆ ಮಾಡದೆ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದ ಸುಮಾರು 450 ಕೋಟಿ ರೂ.ಗಳನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದರು. ಹೊಸ ಕುಲಪತಿಗಳಾಗಿ ಡಾ.ಕರಿಸಿದ್ದಪ್ಪ ಅವರು ಅಧಿಕಾರ ವಹಿಸಿಕೊಂಡಿದ್ದರೂ ಪರೀಕ್ಷೆ ಮೌಲ್ಯಮಾಪನದಲ್ಲಿ ಗೊಂದಲ ಮುಂದುವರಿದಿದೆ.